ಓ.ಎಸ್. ನಂಃ 394/2022
ಪಿ.ಡಬ್ಲ್ಯೂ-2 (ಆನಂದ)

ದಿನಾಂಕ: 14-11-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ಶ್ರೀ.ಎಮ್.ಆರ್.ಬಿ. 1 ಮತ್ತು 2ನೇ ಪ್ರತಿವಾದಿ ಪರ ವಕೀಲರಿಂದಃ**

ಸರ್ವೆ ನಂ.26/1 ಕ್ಷೇತ್ರ 03ಎ-08ಗುಂ ಜಮೀನು ಉತಾರದ ಪ್ರಕಾರ ಪ್ರತಿವಾದಿ 1,2 ಮತ್ತು ನಿಂಗವ್ವ ಕೋಂ ಭೀಮಪ್ಪ ನಾಯ್ಕ ಇವರ ಹೆಸರಿನಲ್ಲಿ ಜಂಟಿಯಾಗಿ ಇದೆ ಎಂದರೆ ಸರಿ. ನಿಂಗವ್ವ ಕೋಂ ಭೀಮಪ್ಪ ನಾಯ್ಕ ವಾದಿಯ ತಾಯಿ ಎಂದರೆ ನನಗೆ ಮಾಹಿತಿ ಇಲ್ಲ.

2. ಸರ್ವೆ ನಂ.26/1ಕ್ಕೆ ದಿನಾಂಕ 11.07.2017 ರಂದು ಖರೀದಿ ಕರಾರ ಪತ್ರ ಬರೆದಾಗ ನಿಂಗವ್ವ ಕೋಂ ಭೀಮಪ್ಪ ನಾಯ್ಕ ಮತ್ತು ಭೀಮನಾಯ್ಕ ಹುಚ್ಚಪ್ಪ ನಾಯ್ಕ ಇವರ ಹೆಸರಿನಲ್ಲಿ ಜಂಟಿಯಾಗಿ ಇತ್ತು ಎಂದರೆ ಸರಿ. ಭೀಮನಾಯ್ಕ ಹುಚ್ಚಪ್ಪ ನಾಯ್ಕ ಈಗ ಮೃತಪಟ್ಟಿದ್ದು, ಜಂಟಿಯಾಗಿ ಪ್ರತಿವಾದಿ 1 ಮತ್ತು 2 ವಾರಸುದಾರರು ಆಗಿರುತ್ತಾರೆ ಎಂದರೆ ಸರಿ.

3. ಪಹಣಿ ಪತ್ರಿಕೆಯಲ್ಲಿ ಹೆಸರುಗಳು ಜಂಟಿಯಾಗಿದ್ದಲ್ಲಿ ಆ ಜಮೀನಿನಲ್ಲಿ ಪಾಲು ಆಗಿಲ್ಲ ಎಂದು ಅರ್ಥ ಆಗುತ್ತದೆ ಎಂದರೆ ಸರಿ. ಖರೀದಿ ಕರಾರ ಪತ್ರದಲ್ಲಿ ನಮೂದಿಸಿದ ಚಕ್ಕಬಂದಿಯು ಪಕ್ಷಗಾರರು ತಾವು ಕಬ್ಜಾ ವಹಿವಾಟಿಯಲ್ಲಿ ಇದ್ದ ಬಗ್ಗೆ ಹೇಳಿದ ಆಧಾರದ ಮೇಲೆ ಬರೆದಿರುತ್ತೇನೆ.

4. ಖರೀದಿ ಕರಾರ ಪತ್ರದಲ್ಲಿ ಬರೆದ 01ಎ-24ಗು ಎಂದು ಸರ್ವೆ ನಂ.26/1ರ ಪಹಣಿ ಪತ್ರಿಕೆಯಲ್ಲಿ ನಮೂದು ಇಲ್ಲ ಎಂದರೆ ಸರಿ. ಸದರಿ ಜಮೀನಿನ ಪಹಣಿ ಪತ್ರಿಕೆಯಲ್ಲಿ ಹೆಸರುಗಳು ಜಂಟಿಯಾಗಿದ್ದು ಚಕ್ಕಬಂದಿ ಬರೆಯಲು ಬರುವುದಿಲ್ಲ ಎಂದು ನಾನು ಪಕ್ಷಗಾರರಿಗೆ ಹೇಳಿಲ್ಲ. ಖರೀದಿ ಕರಾರ ಪತ್ರದಲ್ಲಿ ನಮೂದಿಸಿದ ಆಸ್ತಿಯ ಪೂರ್ವಕ್ಕೆ ನಿಂಗವ್ವ ಭೀಮಪ್ಪ ನಾಯ್ಕ ಇವರ ಜಮೀನು ಬರುತ್ತದೆ ಎಂದು ತೋರಿಸಲು ಪಕ್ಷಗಾರರು ಯಾವುದೇ ದಾಖಲೆ ತಂದಿರಲಿಲ್ಲ.

5. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನನ್ನ ಕಚೇರಿಗೆ ಬಂದ ಹಿರಿಯರು ಯಾರು ಖರೀದಿ ಕರಾರ ಪತ್ರಕ್ಕೆ ಸಹಿ ಮಾಡಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ 2ನೇ ಖಂಡಿಕೆಯಲ್ಲಿ ಖರೀದಿ ಕರಾರು ಪತ್ರ ಯಾರ ಹೆಸರಿಗೆ ಬರೆಯಲಾಗಿದೆ ಎಂದು ಬರೆದಿಲ್ಲ ಎಂದರೆ ಸರಿ. ಖರೀದಿ ಕರಾರ ಪತ್ರದಲ್ಲಿ ನಾನು ಪಕ್ಷಗಾರರಿಂದ ಪಡೆದ ಆಧಾರ ಕಾರ್ಡಗಳ ನಂಬರ ನಮೂದಿಸಿಲ್ಲ ಎಂದರೆ ಸರಿ.

6. ಖರೀದಿ ಕರಾರ ಪತ್ರದಲ್ಲಿ ದಿನಾಂಕ 26/07/2017 ರಂದು ಮುಂಗಡ ಹಣ ಮುಟ್ಟಿದೆ ಎಂದು ನಮೂದಿಸಿಲ್ಲ ಎಂದರೆ ಸರಿ. ದಿನಾಂಕ 26/07/2017 ರಂದು ಮೃತ ಭೀಮನಾಯ್ಕ ಹುಚ್ಚಪ್ಪ ನಾಯ್ಕ ಮತ್ತು ಆತನ ಸೊಸೆ ಮತ್ತು ಮಕ್ಕಳು ವಾದಿಯ ಕಡೆಯಿಂದ ರೂ.6,00,000/- ಗಳ ಪೈಕಿ ರೂ.5,16,000/- ಪಡೆದುಕೊಂಡಿರುತ್ತಾರೆ ಎಂದು ಖರೀದಿ ಕರಾರ ಪತ್ರದಲ್ಲಿ ನಮೂದಿಸಿಲ್ಲ ಎಂದರೆ

ಸರಿಯಲ್ಲ. ಖರೀದಿ ಕರಾರ ಪತ್ರದಲ್ಲಿ ದಿನಾಂಕ 26/07/2017 ರಂದು ರೂ.6,00,000/- ಗಳ ಪೈಕಿ ರೂ.5,16,000/- ಗಳನ್ನು ಮೃತ ಭೀಮನಾಯ್ಕ ಹುಚ್ಚಪ್ಪ ನಾಯ್ಕ ಹಾಗೂ ಅವರ ಸೊಸೆ ಮತ್ತು ಮಕ್ಕಳು ವಾದಿಯ ಕಡೆಯಿಂದ ಪಡೆದಿರುತ್ತಾರೆ ಎಂದು ಹೇಳಿಲ್ಲ.

7. ಉಪ-ನೋಂದಣಿ ಅಧಿಕಾರಿಗಳ ಸಮಕ್ಷಮ ಖರೀದಿ ಮೊತ್ತ ಕೊಟ್ಟ ಪಕ್ಷದಲ್ಲಿ ಖರೀದಿ ಕರಾರ ಪತ್ರ ಅಥವಾ ಖರೀದಿ ಪತ್ರದಲ್ಲಿ ಉಪ-ನೋಂದಣಿ ಅಧಿಕಾರಿಗಳು ನಮೂದಿಸುತ್ತಾರೆ ಎಂದರೆ ಸರಿ. ನಿಪಿ-1ರಲ್ಲಿ ದಿನಾಂಕ 26/07/2017 ರಂದು ರೂ.5,16,000/- ಮುಟ್ಟಿರುತ್ತವೆ ಎಂದು ನಮೂದಿಸಿಲ್ಲ ಎಂದರೆ ಸರಿ. ನಿಪಿ-1ನ್ನು ತಯಾರ ಮಾಡಿದ ನಂತರ ಸದರಿ ದಾಖಲೆಯನ್ನು ಪಕ್ಷಗಾರರ ಕೈಯಲ್ಲಿ ಕೊಟ್ಟು ಉಪ-ನೋಂದಣಿ ಅಧಿಕಾರಿಗಳ ಕಚೇರಿಗೆ ಕಳುಹಿಸಿಕೊಟ್ಟಿರುತ್ತೇನೆ. ನಾನು ಉಪ-ನೋಂದಣಿ ಅಧಿಕಾರಿಗಳ ಕಚೇರಿಗೆ ಹೋಗಿರುವುದಿಲ್ಲ. ನೋಂದಣಿ ಮಾಡಿಸಲು ದಾಖಲೆಯನ್ನು ಉಪ-ನೋಂದಣಿ ಅಧಿಕಾರಿಗಳ ಸಮಕ್ಷಮ ಹಾಜರ ಮಾಡಿದಾಗ ಅವರು ಏನೇನು ವಿಚಾರಣೆ ಮಾಡಿರುತ್ತಾರೆ ಎಂದು ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ.

8. ನಿಪಿ-1ನ್ನು 11/07/2017 ರಂದು ತಯಾರ ಮಾಡಿದ್ದು ಅದರ ನೋಂದಣಿಯನ್ನು 15 ದಿನದ ನಂತರ ಅಂದರೆ 26/07/2017 ರಂದು ಮಾಡಲಾಗಿದೆ ಎಂದರೆ ಸರಿ. ಈ 15 ದಿನದ ಸಮಯದಲ್ಲಿ ಗೋಕಾಕ ನೋಂದಣಿ ಕಚೇರಿಯಲ್ಲಿ ಸಾಕಷ್ಟು ದಾಖಲೆಗಳು ನೋಂದ ಆಗಿರುತ್ತವೆ ಎಂದರೆ

ಸರಿ. ಸದರಿ 15 ದಿನ ಅಂತರದಲ್ಲಿ ಬೇರೆ ಪಕ್ಷಗಾರರ ನಾನು ಬರೆದುಕೊಟ್ಟ ದಾಖಲೆಗಳು ಸಹ ನೋಂದ ಆಗಿರುತ್ತವೆ ಎಂದರೆ ನನಗೆ ಮಾಹಿತಿ ಇರುವುದಿಲ್ಲ. ಉಪ-ನೋಂದಣಿ ಅಧಿಕಾರಿಗಳ ಕಚೇರಿಯಲ್ಲಿ ಸರ್ವರ್ ಸಮಸ್ಯೆ ಇದ್ದ ಪಕ್ಷದಲ್ಲಿ ದಾಖಲೆಗಳು ನೋಂದ ಮಾಡುವುದಿಲ್ಲ ಎಂದು ನೋಟೀಸು ಹಾಕಿರುತ್ತಾರೆ.

9. ನಿಪಿ-1 ಮಾಡುವುದಕ್ಕಿಂತ ಪೂರ್ವದಲ್ಲಿ ಕಚ್ಚಾ ಟಿಪ್ಪಣಿ ಮಾಡಿಕೊಂಡಿರುತ್ತೇನೆ ಆದರೆ ಅದನ್ನು ಹಾಜರ ಮಾಡಿರುವುದಿಲ್ಲ. ದಿನಾಂಕ 11/07/2017 ರಂದು ನಿಪಿ-1 ತಯಾರ ಮಾಡಿದ ನಂತರ ಅದು ನೋಂದಣಿ ಆಗುವ ದಿನಾಂಕದವರೆಗು ಅಂದರೆ ದಿಃ26/07/2017 ರ ವರೆಗು ನನ್ನ ಕಚೇರಿಯಲ್ಲಿಯೆ ಇತ್ತು. ನನ್ನ ಸಮಕ್ಷಮ ಈ ಖರೀದಿ ಕರಾರ ಪತ್ರಕ್ಕೆ ಸಂಬಂಧಪಟ್ಟ ಹಾಗೆ ನನ್ನ ಕಚೇರಿಯಲ್ಲಿ ದುಡ್ಡಿನ ವ್ಯವಹಾರ ಆಗಿರುವುದಿಲ್ಲ.

10. ಖರೀದಿ ಕರಾರ ಪತ್ರ ಬರೆದುಕೊಟ್ಟ ದಿನಾಂಕದಂದು ಭೀಮನಾಯ್ಕ ಹುಚ್ಚಪ್ಪ ನಾಯ್ಕ 85 ವರ್ಷ ವಯಸ್ಸಿನವರು ಇದ್ದರು ಎಂದರೆ ಸುಮಾರು 65 ವರ್ಷ ವಯಸ್ಸಿನವರು ಇದ್ದರು ಎಂದು ಹೇಳುತ್ತಾರೆ. ನನಗೆ ವಾದಿ, ಪ್ರತಿವಾದಿಯರು ಹಾಗೂ ಮೃತ ಭೀಮನಾಯ್ಕ ಹುಚ್ಚಪ್ಪ ನಾಯ್ಕ ವಯಕ್ತಿಕವಾಗಿ ಪರಿಚಯ ಇರುವುದಿಲ್ಲ. ಭೀಮನಾಯ್ಕ ಹುಚ್ಚಪ್ಪ ನಾಯ್ಕ ವಯಸ್ಸಾಗಿದ್ದರಿಂದ ಖರೀದಿ ಕರಾರ ಪತ್ರ ಬರೆಯಲು ನನಗೆ ಮಾಹಿತಿ ಕೊಡುವಷ್ಟು ಶಕ್ತರಾಗಿರಲಿಲ್ಲ ಎಂದರೆ ಸರಿಯಲ್ಲ.

ಓ.ಎಸ್. ನಂಃ 394/2022
ಪಿ.ಡಬ್ಲ್ಯೂ-2 (ಆನಂದ)

11. ದಸ್ತಾವೇಜು ಬರಹಗಾರ ಆಗುವಕ್ಕಿಂತ ಮೊದಲು ನಾವು ಒಂದು ಪರೀಕ್ಷೆ ಬರೆಯಬೇಕಾಗುತ್ತದೆ ಎಂದರೆ ಸರಿ. ದಸ್ತಾವೇಜ ಬರಹಗಾರ ಮೇಲೆ ಯಾವುದೇ ಕ್ರಿಮಿನಲ್ ಪ್ರಕರಣ ದಾಖಲ ಆದಲ್ಲಿ ದಸ್ತಾವೇಜ ಬರೆಯಲು ಕೊಟ್ಟ ಅನುಮತಿ ರದ್ದು ಮಾಡಲಾಗುತ್ತದೆ ಎಂದು ನಿಯಮಗಳಲ್ಲಿ ಹೇಳಲಾಗಿದೆ ಎಂದರೆ ನನಗೆ ಗೊತ್ತಿಲ್ಲ.

12. ನಿಪಿ-1ನ್ನು ತಯಾರ ಮಾಡಲು ನಾನು ನನ್ನ ಫೀ ರೂ.100/- ತೆಗೆದುಕೊಂಡಿರುತ್ತೇನೆ. ನಾವು ಬರೆದಂತಹ ದಸ್ತಾವೇಜಗಳನ್ನು ಒಂದು ಡಿ-ರಜಿಸ್ಟರನಲ್ಲಿ ನಮೂದಿಸಬೇಕು ಎಂದರೆ ಸರಿ. ನಾನು ಸದರಿ ರಜಿಸ್ಟರನ್ನು ಹಾಜರ ಮಾಡಿಲ್ಲ. ನಾನು ದಸ್ತಾವೇಜ ಬರೆಯಲು ಪಡೆದ ಫೀಗೆ ನಮೂನೆ-ಇ ನಲ್ಲಿ ರಸೀದಿ ಕೊಡಬೇಕು ಎಂದರೆ ಸರಿ. ಸದರಿ ರಸೀದಿಯನ್ನು ನಾನು ಪಕ್ಷಗಾರರಿಗೆ ಕೊಟ್ಟಿರುತ್ತೇನೆ, ನನ್ನ ಬಳಿ ಅದರ ಕೌಂಟರ್ ಫೊಲಿಯೋ ಇರುತ್ತದೆ, ಅದನ್ನು ನಾನು ಹಾಜರ ಮಾಡಿಲ್ಲ ಎಂದರೆ ಸರಿ.

13. ನನ್ನ ಮೇಲೆ ಪೊಲೀಸ ಪ್ರಕರಣ ದಾಖಲಾಗಿ ನಾನು ಸ್ವಲ್ಪ ದಿನ ಪೊಲೀಸ ಬಂಧನದಲ್ಲಿ ಮತ್ತು ನ್ಯಾಯಾಂಗ ಬಂಧನದಲ್ಲಿ ಇದ್ದೆ ಎಂದರೆ ಸರಿ. ನನ್ನ ಮೇಲೆ ಖೋಕಾ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿತ್ತು ಹಾಗೂ ಆ ಪ್ರಕರಣದಲ್ಲಿ ಬೇರೆಯವರ ಹಣದಲ್ಲಿ ನನ್ನ ಹೆಸರಿನಲ್ಲಿ ಆಸ್ತಿ ಖರೀದಿ ಮಾಡಲಾಗಿದೆ ಎಂದು ಆರೋಪಿಸಲಾಗಿತ್ತು. ನನ್ನ ಮೇಲೆ ಒಟ್ಟು 04

ಪ್ರಕರಣಗಳು ದಾಖಲ ಆಗಿದ್ದವು. ಖೊಟ್ಟಿ ದಸ್ತಾವೇಜುಗಳನ್ನು ಬರೆಯುವದಿದ್ದರೆ ಗೋಕಾಕ ಮತ್ತು ಮೂಡಲಗಿ ತಾಲೂಕಿನ ಜನರು ನನ್ನ ಬಳಿ ಬರುತ್ತಾರೆ ಎಂದರೆ ಸರಿಯಲ್ಲ.

14. ಭೀಮನಾಯ್ಕ ಹುಚ್ಚಪ್ಪ ನಾಯ್ಕ ಇವರು ನನಗೆ ನಿಪಿ-1ನ್ನು ಬರೆಯಲು ಯಾವುದೇ ಮಾಹಿತಿ ಕೊಡದೇ ಇದ್ದರೂ ಸಹ ನಿಪಿ-1ರಲ್ಲಿ ನಮೂದಿಸಿದ್ದ ಹಣ ಸಂದಾಯವಾಗದೇ ಇದ್ದರೂ ಸಹ ವಾದಿಯ ಮಾತು ಕೇಳಿ ನಿಪಿ-1ರಂತೆ ಸುಳ್ಳು ದಾಖಲೆ ಬರೆದಿರುತ್ತೇನೆ ಎಂದರೆ ಸರಿಯಲ್ಲ. ದಿನಾಂಕ 11/07/2017 ರಂದು ಪಕ್ಷಗಾರರ ಕೊಟ್ಟ ಮಾಹಿತಿಯ ಪ್ರಕಾರ ನಿಪಿ-1ನ್ನು ತಯಾರ ಮಾಡಿರುತ್ತೇನೆ ಎಂದು ವಾದಿಯ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

15. ಜಮೀನಿನ ಪಹಣಿ ಪತ್ರಿಕೆಯಲ್ಲಿ ನ್ಯಾಯಾಲಯದಿಂದ ತಡೆಯಾಜ್ಞೆ ಇದೆ ಎಂದು ನಮೂದಿಸಿದ್ದಲ್ಲಿ ಅದನ್ನು ತೆಗೆಯಿಸಿಕೊಂಡು ಬನ್ನಿ ಎಂದು ಹೇಳುತ್ತೇವೆ ಎಂದರೆ ಸರಿ. ನಿಪಿ-4 ಮತ್ತು 5ರಲ್ಲಿ ನ್ಯಾಯಾಲಯದಿಂದ ತಡೆಯಾಜ್ಞೆ ಇದೆ ಎಂದು ನಮೂದು ಇದೆ ಎಂದರೆ ಸರಿ. ನಿಪಿ-1ನ್ನು ಬರೆಯುವಾಗ ನನಗೆ ಕೊಟ್ಟ ಪಹಣಿ ಪತ್ರಿಕೆಯಲ್ಲಿ ನ್ಯಾಯಾಲಯದ ತಡೆಯಾಜ್ಞೆ ಇದ್ದ ಬಗ್ಗೆ ನಮೂದು ಇರಲಿಲ್ಲ. ಪಹಣಿ ಪತ್ರಿಕೆಯಲ್ಲಿಯ ವಿಷಯ ಸರಿ ಇದೆಯೋ ಇಲ್ಲವೊ ಎಂದು ತಿಳಿದುಕೊಳ್ಳಲು ನಮ್ಮ ಕಚೇರಿಯಲ್ಲಿ ಭೂಮಿ

ಆ್ಯಪ್ ಕಂಪ್ಯೂಟರ ಇದೆ ಎಂದರೆ ಸರಿ. ನಾವು ಆ ಆ್ಯಪ್‌ನಲ್ಲಿ ಪರಿಶೀಲಿಸಿ ನೋಡುತ್ತೇವೆ.

16. ನಿಪಿ-3 ರಿಂದ 5 ರ ಪ್ರಕಾರ 2016-17 ರಿಂದ 2019 ರ ವರೆಗೆ ನ್ಯಾಯಾಲಯದ ತಡೆಯಾಜ್ಞೆ ಇದೆ ಎಂದು ನಮೂದು ಇದೆ ಎಂದರೆ ಸರಿ. ನಾನು ನಿಪಿ-1ನ್ನು ಬರೆಯುವ ಸಮಯದಲ್ಲಿ 2017ನೇ ಸಾಲಿನ ಪಹಣಿ ಪತ್ರಿಕೆ ನೋಡಿರುತ್ತೇನೆ. ನಿಪಿ-3 ರಿಂದ 5 ರವರೆಗಿನ ಪಹಣಿ ಪತ್ರಿಕೆಗಳ ಹೊರತಾಗಿ ನನ್ನ ಬಳಿ ಸರ್ವೆ ನಂ.26/1ಕ್ಕೆ ಸಂಬಂಧಪಟ್ಟ ಬೇರೆ ಪಹಣಿ ಪತ್ರಿಕೆಗಳು ಇರುವುದಿಲ್ಲ. ಪಕ್ಷಗಾರರ ಬಳಿ ಇವೆಯೋ ಇಲ್ಲವೊ ಎಂದು ನನಗೆ ಗೊತ್ತಿಲ್ಲ.

17. ನ್ಯಾಯಾಲಯದ ಆದೇಶ ಪಾಲಿಸುವುದು ನನ್ನ ಕರ್ತವ್ಯ ಎಂದರೆ ಸರಿ. ನಿಪಿ-1ನ್ನು ಬರೆಯುವಾಗ ಸರ್ವೆ ನಂ.26/1ಕ್ಕೆ ಯಾವ ವರ್ಷದ ಪಹಣಿ ಪತ್ರಿಕೆಯನ್ನು ನೋಡಿರುತ್ತೇನೆ ಎಂದು ನನಗೆ ಈಗ ನೆನಪಿಸಿಕೊಂಡು ಹೇಳಲು ಆಗುವುದಿಲ್ಲ. ನೋಂದಣಿ ಅಧಿಕಾರಿಗಳು ಸಹ ದಾಖಲೆ ನೋಂದ ಮಾಡುವಾಗ ನ್ಯಾಯಾಲಯದ ತಡೆಯಾಜ್ಞೆ ಇದ್ದ ಬಗ್ಗೆ ಪರೀಶಿಲಿಸುತ್ತಾರೆ ಎಂದರೆ ಸರಿ. ಪಹಣಿ ಪತ್ರಿಕೆಯಲ್ಲಿ ನ್ಯಾಯಾಲಯದ ತಡೆಯಾಜ್ಞೆ ಇದೆ ಎಂದು ನಮೂದಿಸಿದ್ದಲ್ಲಿ ದಾಖಲೆಯನ್ನು ನೋಂದ ಮಾಡವುದಿಲ್ಲ ಎಂದರೆ ಸರಿ. ನಾನು, ವಾದಿ ಹಾಗೂ ನೋಂದಣಿ ಅಧಿಕಾರಿಗಳು ಸೇರಿಕೊಂಡು ನ್ಯಾಯಾಲಯದ ತಡೆಯಾಜ್ಞೆ ಇದ್ದರೂ ಸಹ ಅದನ್ನು ಉಲ್ಲಂಘಿಸಿ ನಿಪಿ-1ನ್ನು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ

ಓ.ಎಸ್. ನಂಃ 394/2022
ಪಿ.ಡಬ್ಲ್ಯೂ-2 (ಆನಂದ)

ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲ ವಿಷಯಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ